**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**
**<u>ಸಿ.ಸಿ.954/2023</u>**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಸುಧೀರ್ | ಪ್ರಾಸಾ -3 |
| ತಂದೆಯ ಹೆಸರು | ಃ ಶ್ರೀಧರ್ | ಚಾಸಾ-3 |
| ವಯಸ್ಸು | ಃ 34 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | ಃ ಮೆಕ್ಯಾನಿಕ್ | ದಿನಾಂಕಃ22.01.2024. |
| ವಾಸಸ್ಥಳ | ಃ ಕುದುರೆಮುಖ | |

**<u>ಮುಖ್ಯ ವಿಚಾರಣೆ ಪ್ರಾಜ್ಞಾ ಸ.ಸ.ಅ. ರವರಿಂದಃ</u>**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿದೆ. ಚಾಸಾ-2 ರವರು ನನಗೆ ಪರಿಚಯ.

ಸಾಕ್ಷಿಯು ನಿಪಿ-3 ರಲ್ಲಿ ತಮ್ಮ ಸಹಿಯನ್ನು ಗುರುತಿಸಿ ನಿಪಿ-4 ರಿಂದ 9 ರ ಭಾವಚಿತ್ರಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ನಿಪಿ-3 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು.

ಕಳೆದ 6 ತಿಂಗಳ ಹಿಂದೆ ನಾನು ಹೊರನಾಡಿನಿಂದ ಕಳಸಕ್ಕೆ ಬರುತ್ತಿರುವಾಗ ಕಳಸ ಪೋಲಿಸರು ನನ್ನನ್ನು ಠಾಣೆಗೆ ಕರೆದು ನಿಪಿ-3 ಕ್ಕೆ ನನ್ನ ಸಹಿ ಪಡೆದಿರುತ್ತಾರೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು ಸಹಿ ಮಾಡುವ ಕಾಲಕ್ಕೆ ನಿಪಿ-3 ರಲ್ಲಿ ಏನು ಬರೆದಿರಲಿಲ್ಲ. ಭಾವಚಿತ್ರಗಳನ್ನು ಠಾಣೆಯ ರಸ್ತೆಯ ಪಕ್ಕದಲ್ಲಿ ತೆಗೆದಿದ್ದು ಯಾವ ವಿಚಾರಕ್ಕೆ ಎಂದು ನನಗೆ ಗೊತ್ತಿಲ್ಲ. ನಿಪಿ-6 ರಿಂದ 9 ರಲ್ಲಿ ಕಾಣುವ ವಾಹನಗಳ ಬಗ್ಗೆ ನನಗೆ ಏನು ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಏನನ್ನೂ ಅಮಾನತ್ತುಪಡಿಸಿಕೊಂಡಿಲ್ಲ. ಸಹಿ ಮಾಡುವಾಗ ಮದ್ಯಾಹ್ನದ ಸಮಯವಾಗಿತ್ತು ಹಾಗೂ ನನ್ನೊಂದಿಗೆ ಚಾಸಾ-2 ರವರು ಸಹಾ ಇದ್ದರು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು ಪ್ರಾಜ್ಞಾ ಸ.ಸ.ಅ. ರವರಿಂದ</u>**

ಚಾಸಾ-15 ರವರು ನಾನು ಕೆಲಸ ಮಾಡುವ ಸಂಸ್ದೆಯ ಮಾಲೀಕರು ಎಂದರೆ ಸರಿ. ಆರೋಪಿಯು ಸಹಾ ಅದೇ ಸಂಸ್ಥೆಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಆರೋಪಿ ಓಡಿಸುತ್ತಿದ್ದ ಬಸ್ ಮತ್ತು ಚಾಸಾ-1 ರವರ ಕಾರಿನ ನಡುವೆ ಅಪಘಾತವಾಗಿದೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ದಿ.25.07.2023 ರಂದು ಸ.5.30 ರಿಂದ 6.30 ರ ಸಮಯಕ್ಕೆ ಕಳಸ-ಮರಸಣಿಗೆ ಮಧ್ಯೆ ಹಾದುಹೋಗಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಹಿ

ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯಕ್ಕೆ ನಿಪಿ-4 ರಿಂದ 9 ರ ಭಾವಚಿತ್ರಗಳನ್ನು ತೆಗೆಯಲಾಗಿದೆ ಎಂದರೆ ಸರಿಯಲ್ಲ. ನಿಪಿ-6 ರಿಂದ 9 ರಲ್ಲಿ ಕಾಣುವ ವಾಹನಗಳ ನಡುವೆ ಅಪಘಾತವಾದ ಬಗ್ಗೆ ಹಾಗೂ ಚಾಸಾ-1 ರವರ ತಂದೆ ಅಂತೋನಿ ಮತಾಯಿಸ್ ರವರು ಅಪಘಾತದಿಂದ ಮೃತಪಟ್ಟ ಬಗ್ಗೆ ಚಾಸಾ-1 ರವರು ಸ್ಥಳ ತೋರಿಸಿದ ಮೇರೆಗೆ ನಿಪಿ-3 ರಂತೆ ಮಹಜರ್ ಕ್ರಮ ಜರುಗಿಸಿ ಭಾವಚಿತ್ರಗಳಲ್ಲಿ ಕಾಣುವ ವಾಹನಗಳನ್ನು ನನ್ನ ಹಾಗೂ ಚಾಸಾ-2 ರವರ ಸಮಕ್ಷಮ ಅಮಾನತ್ತುಪಡಿಸಿಕೊಳ್ಳಲಾಯಿತು ಎಂದರೆ ಸರಿಯಲ್ಲ.

ನಾನು ಚಾಸಾ-15 ರವರ ಮಾತು ಕೇಳಿ ಪ್ರಕರಣದ ಬಗ್ಗೆ ವಿಚಾರಗಳು ತಿಳಿದಿದ್ದರೂ ಸಹಾ ಆರೋಪಿ ಮತ್ತು ಚಾಸಾ-15 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

<u>**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**</u>
<u>**ಸಿ.ಸಿ.954/2023**</u>

| | | |
|---|---|---|
| ಸಾಕ್ಷಿದಾರರ ಹೆಸರು | ಃ ಪ್ರಾಣೇಶ್ | ಪ್ರಾಸಾ -2 |
| ತಂದೆಯ ಹೆಸರು | ಃ ಶಂಕರಾಚಾರ್ಯ | ಚಾಸಾ-2 |
| ವಯಸ್ಸು | ಃ 38 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | ಃ ಮೆಕ್ಯಾನಿಕ್ | ದಿನಾಂಕಃ22.01.2024. |
| ವಾಸಸ್ಥಳ | ಃ ಹೊರನಾಡು | |

<u>**ಮುಖ್ಯ ವಿಚಾರಣೆ ಪ್ರಾಜ್ಞಾ ಸ.ಸ.ಅ. ರವರಿಂದಃ**</u>

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿದೆ. ಚಾಸಾ-3 ರವರು ನನಗೆ ಪರಿಚಯ.

ಸಾಕ್ಷಿಯು ನಿಪಿ-3 ರಲ್ಲಿ ತಮ್ಮ ಸಹಿಯನ್ನು ಗುರುತಿಸಿ ನಿಪಿ-4 ರಿಂದ 9 ರ ಭಾವಚಿತ್ರಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ನಿಪಿ-3 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು.

ಕಳೆದ 6 ತಿಂಗಳ ಹಿಂದೆ ನಾನು ಹೊರನಾಡಿನಿಂದ ಕಳಸಕ್ಕೆ ನನ್ನ ವಾಹನದಲ್ಲಿ ಬರುತ್ತಿರುವಾಗ ಕಳಸ ಪೋಲಿಸರು ದೂರವಾಣಿ ಕರೆ ಮಾಡಿ ಠಾಣೆಗೆ ಬರುವಂತೆ ತಿಳಿಸಿ ನಾನು ಠಾಣೆಗೆ ಹೋದಾಗ ನಿಪಿ-3 ಕ್ಕೆ ನನ್ನ ಸಹಿ ಪಡೆದಿರುತ್ತಾರೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು ಸಹಿ ಮಾಡುವ ಕಾಲಕ್ಕೆ ನಿಪಿ-3 ರಲ್ಲಿ ಏನು ಬರೆದಿರಲಿಲ್ಲ. ಭಾವಚಿತ್ರಗಳನ್ನು ಠಾಣೆಯ ರಸ್ತೆಯ ಪಕ್ಕದಲ್ಲಿ ತೆಗೆದಿದ್ದು ಯಾವ ವಿಚಾರಕ್ಕೆ ಎಂದು ನನಗೆ ಗೊತ್ತಿಲ್ಲ. ನಿಪಿ-6 ರಿಂದ 9 ರಲ್ಲಿ ಕಾಣುವ ವಾಹನಗಳ ಬಗ್ಗೆ ನನಗೆ ಏನು ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಏನನ್ನೂ ಅಮಾನತ್ತುಪಡಿಸಿಕೊಂಡಿಲ್ಲ. ಸಹಿ ಮಾಡುವಾಗ ಮದ್ಯಾಹ್ನ 3.00 ಗಂಟೆಯಾಗಿದ್ದು ನಾನೊಬ್ಬನೇ ಇದ್ದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

<u>**ಪಾಟೀ ಸವಾಲು ಪ್ರಾಜ್ಞಾ ಸ.ಸ.ಅ. ರವರಿಂದ**</u>

ದಿ.25.07.2023 ರಂದು ಸ.5.30 ರಿಂದ 6.30 ರ ಸಮಯಕ್ಕೆ ಕಳಸ-ಮರಸಣಿಗೆ ಮಧ್ಯೆ ಹಾದುಹೋಗಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯಕ್ಕೆ ನಿಪಿ-4 ರಿಂದ 9 ರ ಭಾವಚಿತ್ರಗಳನ್ನು ತೆಗೆಯಲಾಗಿದೆ ಎಂದರೆ ಸರಿಯಲ್ಲ. ನಿಪಿ-6 ರಿಂದ 9 ರಲ್ಲಿ ಕಾಣುವ ವಾಹನಗಳ ನಡುವೆ ಅಪಘಾತವಾದ ಬಗ್ಗೆ ಹಾಗೂ ಚಾಸಾ-1 ರವರ ತಂದೆ ಅಂತೋನಿ

ಮತಾಯಿಸ್ ರವರು ಅಪಘಾತದಿಂದ ಮೃತಪಟ್ಟ ಬಗ್ಗೆ ಚಾಸಾ-1 ರವರು ಸ್ಥಳ ತೋರಿಸಿದ ಮೇರೆಗೆ ನಿಪಿ-3 ರಂತೆ ಮಹಜರ್ ಕ್ರಮ ಜರುಗಿಸಿ ಭಾವಚಿತ್ರಗಳಲ್ಲಿ ಕಾಣುವ ವಾಹನಗಳನ್ನು ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ಅಮಾನತ್ತುಪಡಿಸಿಕೊಳ್ಳಲಾಯಿತು ಎಂದರೆ ಸರಿಯಲ್ಲ.

ನಾನು ಬಸ್ ಮತ್ತು ಕಾರನ್ನು ರಿಪೇರಿ ಮಾಡುತ್ತೇನೆ. ಆರೋಪಿ ಬಸ್ ಚಾಲಕನಾದ ಕಾರಣ ಅವರ ಪರಿಚಯ ನನಗಿದ್ದು ಅವರಿಗೆ ಸಹಾಯಮಾಡುವ ಉದ್ದೇಶದಿಂದ ಪ್ರಕರಣದ ಬಗ್ಗೆ ವಿಚಾರಗಳು ತಿಳಿದಿದ್ದರೂ ಸಹಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಪಾಟೀ ಸವಾಲುಃ ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**</u>

<u>**ಮರು ವಿಚಾರಣೆ ಇಲ್ಲ**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.